ಮೈಸೂರ ಗೆಜೆಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 22, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗೆವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.
ಫಾರೆಸ್ಟ್ ಇಲಾಖಾ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು ಸಿಕಾರಿಪುರದ ಕೋಠಿ		—14ನೇ ನವಂಬರ್ 1890	—ಹೆಚ್ಚು ಕಡಮೆ 250 ಟ್ನಗಳು.
ಶಿವಮೊಗ್ಗಾ	..	ಡಿಟೋ—17ನೇ ಡಿಟೋ	450 ಡಿಟೋ
ತೀರ್ಥಹಳ್ಳಿ	..	ಡಿಟೋ—22ನೇ ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು	ಡಿಟೋ	—28ನೇ ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ		ಡಿಟೋ— 4ನೇ ಡಿಸಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ		ಡಿಟೋ—10ನೇ ಡಿಟೋ	350 ಡಿಟೋ
ಹುಣಸೂರು ಡಿಟೋ		ಡಿಟೋ—15ನೇ ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು		ಡಿಟೋ—20ನೇ ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮುಕ್ಕಂಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ವೋದ ಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ನಂದೀದುರ್ಗ ಡಿವಿಜ್ಞ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟ್‌ನಿಂದಾ.

1890ನೇ ಇಸವಿ ಮಿಸಲೇನಿಯಸ್ ನಂಬರ್ 119.

ಆರ್ಜೀದಾರು.	ಎದುರು ಆರ್ಜೀದಾರು.
ಬೆಂಗಳೂರು ವ್ಯಾಪಾರಾಭಿವೃದ್ಧಿ ಕಂಪನಿ ಲಿಮಿಟೆಡ್ ಕ್ರಿಡಿಟರುಗಳು ಮತ್ತು ಷೇರುದಾರುಗಳಾದ 1ನೇ ನಂಜಂಣ ವಗೈರೆ 9 ಜನ.	ಸದರೀ ಕಂಪನಿ ಏಜಂಟ್ ಮತ್ತು ಡೈರೆಕ್ಟರುಗಳಾದ 1ನೇ ರಾಮಚಂದ್ರರಾವ್ ವಗೈರೆ 4 ಜನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡ ಆರ್ಜೀದಾರು, ಬೆಂಗಳೂರು ವ್ಯಾಪಾರಾಭಿವೃದ್ಧಿ ಕಂಪನಿ ಲಿಮಿಟೆಡ್ ಸ್ 1866ನೇ ಇಸವಿ ಕಂಪನಿ ಆಕ್ಟು ಮೇರಿಗೆ ಸ್ 1875ನೇ ಇಸವಿಯಲ್ಲಿ ರಿಜಿಸ್ಟರಾಗಿ ಕಳದ 7 ತಿಂಗಳ ವರವಿಗೂ ನಡಿಯುತ್ತಾ ಬಂದು ಈಚಿಗೆ ಕೊಟ್ಟ ಸಾಲಗಳು ವಾಪಸ್